ಅಸಲು ದಾವಾ ನಂ. 84 /2024
ಪಿ ಡಬ್ಲ್ಯು-1

ದಿನಾಂಕಃ 20.06.2025 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**ಮುಂದು ವರೆದ ಪಾಟೀಸವಾಲುಃ- ಪ್ರತಿವಾದಿ ಪರ ಶ್ರೀ ವಿ.ಬಿ ಟಿ ವಕೀಲರಿಂದ.**

ಕಳ್ಳಿಮನಿ ಮನೆತನದಲ್ಲಿ ನಮ್ಮ ತಂದೆ ಮತ್ತು ನನ್ನ ಅಣ್ಣ ಎರಡು ಲಗ್ನ ಮಾಡಿಕೊಂಡಿರುತ್ತಾರೆ. ಬಸವ್ವ ನಮ್ಮ ತಂದೆಯನ್ನು ಮದುವೆಯಾದ ಬಗ್ಗೆ ತೋರಿಸಲು ಫೋಟೊ ಇಲ್ಲ. 1 ನೇ ಪ್ರತಿವಾದಿ ಎರಡು ಲಗ್ನ ಮಾಡಿಕೊಂಡ ಬಗ್ಗೆ ಫೋಟೋ ಇಲ್ಲ. ಬಸವಣ್ಣೆಪ್ಪ ಯಾವ ಇಶ್ವಿಯಲ್ಲಿ ವಾಟ್ನಿ ಮಾಡಿಕೊಂಡಿರುತ್ತಾರೆ ಎಂದು ಗೊತ್ತಿಲ್ಲ . ಅವರಿಗೆ ಇಷ್ಟು ಪಾಲು ಬಂದ ಬಗ್ಗೆ ನ್ಯಾಯಾಲಯದ ದಾಖಲೆ ಇಲ್ಲವೆ ನೊಂದಾಯಿತ ದಾಖಲೆ ಇರುವುದಿಲ್ಲ. ಶೆಟ್ಟೆಪ್ಪನಿಗೆ ಬಸವಣ್ಣೆಪ್ಪ ಇವರಿಂದ ಆಸ್ತಿಗಳು ಬಂದ ಬಗ್ಗೆ ಖರೀದಿ ಪತ್ರ ಇಲ್ಲವೆ ಇನ್ನಿತರ ಯಾವುದೇ ಪತ್ರ ನನ್ನ ಬಳಿ ಇಲ್ಲ. ಸಾಕ್ಷಿ ಅವು ಸುಟ್ಟು ಹೋಗಿರುತ್ತವೆ ಎಂದು ನುಡಿಯುತ್ತಾರೆ. ಬಸವಣ್ಣೆಪ್ಪ 1 ನೇ ಪ್ರತಿವಾದಿಗೆ ಆಸ್ತಿಗಳನ್ನು ಬಿಟ್ಟುಕೊಟ್ಟಿರುವುದಾಗಿ ಹೇಳುತ್ತಿದ್ದು ಹಾಗೆ ಯಾವಾಗ ಬಿಟ್ಟು ಕೊಟ್ಟಿರುತ್ತಾರೆ ಎಂದು ಗೊತ್ತಿಲ್ಲ. ಅದರ ಕುರಿತು ದಾಖಲೆ ಇಲ್ಲ. 1 ನೇ ಪ್ರತಿವಾದಿ 4 ನೇ ಪ್ರತಿವಾದಿಗೆ ಆಸ್ತಿಗಳನ್ನು ಬಿಟ್ಟುಕೊಟ್ಟ ಬಗ್ಗೆ ನನ್ನ ಬಳಿ ಯಾವುದೇ ದಾಖಲೆ ಇಲ್ಲ. ನಾನು ಬಸವಣ್ಣೆಪ್ಪ ಇವರು ಮಾಡಿಕೊಂಡಿದ್ದಾರೆ ಎನ್ನಲಾದ ವಾಟ್ನಿ ಪತ್ರಕ್ಕೆ ಸಹಿ ಮಾಡಿಲ್ಲ. ಸರ್ವೆ ನಂ.41 ಕಳ್ಳಿಮನಿ ಮನೆತನಕ್ಕೆ ಯಾವ ಆಧಾರದ ಮೇಲಿಂದ ಬಂದಿರುತ್ತದೆ ಎಂದು ಹೇಳಲು ಬರುವುದಿಲ್ಲ. ಕಳ್ಳಿಮನಿ ಮನೆತನಕ್ಕೆ ಸಂಬಂಧಿಸಿದಂತೆ ಹಾವೇರಿ ನ್ಯಾಯಾಲಯ, ಕಂದಾಯ ನ್ಯಾಯಾಲಯ, ಸಿವಿಲ್ ನ್ಯಾಯಾಲಯ ಸವಣೂರು ಇಲ್ಲಿ ಸುಮಾರು 15 ಪ್ರಕರಣಗಳು ಚಾಲ್ತಿಯಲ್ಲಿ ಇರುತ್ತವೆ ಎಂದರೆ ಸರಿ. ನೀಲವ್ವ ಗುರುನಂಜಪ್ಪ ಕಳ್ಳಿಮನಿ ಇವರ ಪ್ರಕರಣ ಈ ದಿವಸ ವಿಚಾರಣೆಯಲ್ಲಿ ಇತ್ತು ಎಂದರೆ ಸರಿ. ದಾವಾ ಆಸ್ತಿ ಕಳ್ಳಿಮನಿ ಮನೆತನಕ್ಕೆ ಯಾವ ನಾಥೆ ಯಿಂದ ಬಂದಿರುತ್ತದೆ ಎಂಬ ಬಗ್ಗೆ ನನಗೆ ನಿಖರವಾದ ಮಾಹಿತಿ ಇಲ್ಲ ಎಂದರೆ ಸರಿ. ದಾವಾ ಆಸ್ತಿಯ ದಕ್ಷಿಣಕ್ಕೆ ಚನ್ನಬಸಪ್ಪ ಕಳ್ಳಿಮನಿ ಇವರ ಜಮೀನು ಇರುತ್ತದೆ. ಪೂರ್ವಕ್ಕೆ ಫಿರಜಾದೆ ಅವರ ಜಮೀನು ಇರುತ್ತದೆ. ಪಶ್ಚಿಮ ಕ್ಕೆ ಊರ ರಸ್ತೆ ಇರುತ್ತದೆ. ಉತ್ತರಕ್ಕೆ ಬಸಲಿಂಗಪ್ಪ ವಗೈರರ ಜಮೀನು ಇರುತ್ತದೆ. ನಾನು ಈಗ ಹೇಳಿದ ಚೆಕುಬಂದಿ ಸರಿಯಾಗಿರುತ್ತದೆ. ಬಸಲಿಂಗಪ್ಪ ಇವರಿಗೆ ಸರ್ವೆ ನಂ.41 ರಲ್ಲಿಯ ಭಾಗ ಬಂದಿರುತ್ತದೆ. ಅವನ ಮಕ್ಕಳಾದ

ಅಸಲು ದಾವಾ ನಂ. 84 /2024
ಪಿ ಡಬ್ಲ್ಯು-1

ಬಸವರಾಜ ಮತ್ತು ಸಿದ್ದಪ್ಪ ಇವರಿಗೆ ಬಸಲಿಂಗಪ್ಪನ ಜಮೀನುಗಳು ಬಂದಿರುತ್ತವೆ. ಬಸವ್ವ ಯಾವ ವರ್ಷದಿಂದ ಎಲ್ಲಿಯವರೆಗೆ ಫಕ್ಕಿರನಂದಿಹಳ್ಳಿ ಗ್ರಾಮದಲ್ಲಿ ವಾಸವಿದ್ದರು ಎಂದು ಗೊತ್ತಿಲ್ಲ. ಪ್ರತಿವಾದಿಯೊರೊಂದಿಗೆ ನಮ್ಮ ಸಂಬಂದ ತೋರಿಸಲು ಹಬ್ಬ ಹರಿದಿನ, ಮದುವೆಯಲ್ಲಿ ಪಾಲ್ಗೊಂ ಡ ಬಗ್ಗೆ ಫೋಟೋಗಳು ಇರುವುದಿಲ್ಲ. ಬಸವಣ್ಣೆಪ್ಪ ಇವರ ಹೆಂಡತಿ ಯಲ್ಲವ್ವ ಮಾತ್ರ ಬಸವ್ವ ಏನೂ ಸಂಬಂಧ ಹೊಂದಿರುವುದಿಲ್ಲ ಎಂದರೆ ಸರಿಯಲ್ಲ. ಬಸವ್ವ ಕಳ್ಳಿಮನಿ ಮನೆತನಕ್ಕೆ ಮತ್ತು ಪ್ರತಿವಾದಿಯರಿಗೆ ಏನೂ ಸಂಬಂಧ ಹೊಂದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಗಳಿಗೆ ಪ್ರತಿವಾದಿ ನಂ.1 ರಿಂದ 5 ಮಾತ್ರ ಹಕ್ಕು ಉಳ್ಳವರು ನಮಗೆ ಏನೂ ಹಕ್ಕು ಇಲ್ಲ ಎಂದರೆ ಸರಿಯಲ್ಲ. 4 ನೇ ಪ್ರತಿವಾದಿ ಯಾವುದೇ ಆಸ್ತಿ ಖರೀದಿ ಹಿಡಿದಿಲ್ಲ. ಆತ ಆಸ್ತಿ ಖರೀದಿ ಹಿಡಿದಿರುವುದಾಗಿ ನನ್ನ ಸಾಕ್ಷ್ಯ ಪ್ರಮಾಣ ಪತ್ರದಲ್ಲಿ ಬರೆಸಿಲ್ಲ. ನಾನು ಸಾಕ್ಯೆ ಪ್ರಮಾಣ ಪತ್ರದ ಸಂಗತಿ ತಿಳಿದುಕೊಳ್ಳದೆ ಸಹಿ ಮಾತ್ರ ಮಾಡಿರುತ್ತೇನೆ ಎಂದರೆ ಸರಿಯಲ್ಲ. 4 ನೇ ಪ್ರತಿವಾದಿಯ ಹೆಸರು ಪಹಣಿಗಳಲ್ಲಿ ಮಾಲ್ಕಿ ಹಕ್ಕಿನಿಂದ ನಮೂದು ಇರುತ್ತದೆ ಅವರೇ ಸ್ವಾಧೀನದಲ್ಲಿ ಇರುತ್ತಾರೆ ಎಂದರೆ ಸರಿ.

ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು ಕೋರಿಕೆಯ ಮೆರೆಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು).

ಓ.ಹೆ.ಕೆ.ಸರಿ.ಇದೆ.

ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು
ಜೆ ಎಮ್ ಎಫ್ ಸಿ, ಶಿಗ್ಗಾಂವ.
(ಸ್ಥಳಃ ಸವಣೂರ).

ಅಸಲು ದಾವಾ  ನಂ. 84  /2024
ಪಿ ಡಬ್ಲು-1